ಸಂಖ್ಯೆ. ಇಡಿ/ಕೆಇಎ/ಯುಜಿಸಿಇಟಿ/2023 ದಿನಾಂಕ. 19.10.2023

# ಯುಜಿಸಿಇಟಿ –2023 (ಇಂಜಿನಿಯರಿಂಗ್) – ವಿಶೇಷ ಸುತ್ತು ಮತ್ತು ದಂಡವಿನಾಯಿತಿ ಸುತ್ತೋಲೆ

ಘನ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಎಐಸಿಟಿಇ ಸಂಸ್ಥೆಯ ಸುತ್ತೋಲೆ ಸಂಖ್ಯೆ. ಎಡಿಬಿ/ಆರ್‌ಬಿ/ಅಕ್ಯಾಡಮಿಕ್ ಕ್ಯಾಲೆಂಡರ್/2023–24 ದಿನಾಂಕ. 17.10.2023ರಂತೆ 2023–24ನೇ ಸಾಲಿನ ಇಂಜಿನಿಯರಿಂಗ್ ಕೋರ್ಸುಗಳಿಗೆ ಪ್ರವೇಶದ ಕೊನೆಯ ದಿನಾಂಕವನ್ನು 30.10.2023ರವರೆಗೆ ವಿಸ್ತರಿಸಲಾಗಿರುತ್ತದೆ. ಆದ್ದರಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಇಂಜಿನಿಯರಿಂಗ್ ಕೋರ್ಸುಗಳಿಗೆ ಸೀಟು ಹಂಚಿಕೆಯನ್ನು ಪಡೆದು ಶುಲ್ಕ ಪಾವತಿಸದ ಅಭ್ಯರ್ಥಿಗಳು ಕಾಲೇಜುಗಳಿಗೆ ನೇರವಾಗಿ ಶುಲ್ಕವನ್ನು ಪಾವತಿಸಿ ಪ್ರವೇಶವನ್ನು ಪಡೆಯಬಹುದು. ಇಂಜಿನಿಯರಿಂಗ್ ವಿದ್ಯಾ ಸಂಸ್ಥೆಗಳು ಸರ್ಕಾರವು 2023–24ನೇ ಸಾಲಿಗೆ ಸರ್ಕಾರಿ ಕೋಟಾದ ಸೀಟುಗಳಿಗೆ ನಿಗಧಿಪಡಿಸಿರುವ ಶುಲ್ಕಕ್ಕಿಂತ ಹೆಚ್ಚಿಗೆ ಪಡೆಯುವಂತಿಲ್ಲ. ಕಾಲೇಜುಗಳು ತಮ್ಮಲ್ಲಿ ಭರ್ತಿಯಾಗದೆ ಬಾಕಿ ಉಳಿದಿರುವ ಸರ್ಕಾರಿ ಕೋಟಾದ ಸೀಟುಗಳನ್ನು ತಮ್ಮ ವೆಬ್‌ಸೈಟಿನಲ್ಲಿ ಪ್ರಕಟಿಸತಕ್ಕದ್ದು.

ಸೀಟು ಹಂಚಿಕೆ ಪಡೆದು ಶುಲ್ಕ ಪಾವತಿಸಿ ಕಾಲೇಜಿಗೆ ವರದಿ ಮಾಡಿಕೊಳ್ಳದ ಅಭ್ಯರ್ಥಿಗಳು ಈಗಗಲೇ ಹಂಚಿಕೆ ಪಡೆದ ಕಾಲೇಜಿಗೆ 30.10.2023ರೊಳಗೆ ವರದಿ ಮಾಡಿಕೊಳ್ಳಬಹುದಾಗಿರುತ್ತದೆ. ಶುಲ್ಕ ಪಾವತಿಸಿ ಅಡ್ಮಿಷನ್ ಆರ್ಡರ್ ಡೌನ್‌ಲೋಡ್ ಮಾಡಿಕೊಳ್ಳದ ಅಭ್ಯರ್ಥಿಗಳು ಪ್ರಾಧಿಕಾರದ ಕಛೇರಿಗೆ ಬಂದು ಶುಲ್ಕ ಪಾವತಿಸಿರುವ ದಾಖಲೆಗಳನ್ನು ಸಲ್ಲಿಸಿ ಅಡ್ಮಿಷನ್ ಆರ್ಡರ್ ಪಡೆದುಕೊಳ್ಳಬಹುದು. ನಂತರ ಕಾಲೇಜಿಗೆ ದಿನಾಂಕ. 30.10.2023ರೊಳಗೆ ವರದಿ ಮಾಡಿಕೊಳ್ಳ ತಕ್ಕದ್ದು. ಅಡ್ಮಿಷನ್ ಆರ್ಡರ್ ಇರುವ ಅಭ್ಯರ್ಥಿಗಳು ನೇರವಾಗಿ ಕಾಲೇಜಿಗೆ ವರದಿ ಮಾಡಿಕೊಳ್ಳಬಹುದು. ಅಂತಹ ಅಭ್ಯರ್ಥಿಗಳು ಈವರೆಗೆ ತಮಗೆ ಹಂಚಿಕೆಯಾಗಿರುವ ಸೀಟು ಕಾಲೇಜಿನಲ್ಲಿ ಭರ್ತಿಯಾಗದೆ ಲಭ್ಯವಿರುವ ಬಗ್ಗೆ ಖಚಿತ ಪಡಿಸಿಕೊಂಡು ನಂತರ ಹೋಗತಕ್ಕದ್ದು.

ಪು.ತಿ.ನೋ..

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in

ಸರ್ಕಾರಿ ಕಾಲೇಜುಗಳಲ್ಲಿ ಬಾಕಿ ಉಳಿದಿರುವ ಸುಮಾರು 237 ಸೀಟುಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಸೀಟು ಹಂಚಿಕೆ ಮಾಡಲಾಗುವುದು. ಆಸಕ್ತ ಅಭ್ಯರ್ಥಿಗಳು ದಿನಾಂಕ. 30.10.2023ರಂದು ರೂ.40,860/- ಗಳಿಗೆ Executive Director, KEA, Bangalore ಇವರ ಹೆಸರಿನಲ್ಲಿ ಡಿಡಿ ತೆಗೆದುಕೊಂಡು ಸೀಟು ಹಂಚಿಕೆಗೆ ಪ್ರಾಧಿಕಾರದಲ್ಲಿ ಬೆಳಿಗ್ಗೆ 10.00 ಗಂಟೆಗೆ ಹಾಜರಾಗಬೇಕು. ಬಾಕಿ ಉಳಿದಿರುವ ಸೀಟುಗಳ ವಿವರವನ್ನು ದಿನಾಂಕ. 20.10.2023ರಂದು ಸಂಜೆ 6.00 ಗಂಟೆಗೆ ಪ್ರಕಟಿಸಲಾಗುವುದು. ಪ್ರಾಧಿಕಾರದಲ್ಲಿ ಮೂರು ಸುತ್ತಿನ ಸೀಟು ಹಂಚಿಕೆಯ ನಂತರ ಯಾವುದೇ ಸೀಟು ಹಂಚಿಕೆಯಾಗದ ಅಭ್ಯರ್ಥಿಗಳು ಮಾತ್ರ ಅರ್ಹರಿರುತ್ತಾರೆ.

ಮತ್ತೊಂದು ಸುತ್ತಿನ ಸೀಟು ಹಂಚಿಕೆ ನಡೆಯುವ ಕಾರಣ ಎರಡನೇ ವಿಸ್ತರಿಸಿದ ಸುತ್ತಿನಲ್ಲಿ ಸೀಟು ಪಡೆದಿರುವ ಅಭ್ಯರ್ಥಿಗಳಿಗೆ ಐದು ಪಟ್ಟು ದಂಡ ಅನ್ವಯವಾಗುವುದಿಲ್ಲ. ಸೀಟನ್ನು ರದ್ದು ಪಡಿಸಲು ಇಚ್ಚಿಸುವ ಅಭ್ಯರ್ಥಿಗಳಿಗೆ (ಎಲ್ಲಾ ವರ್ಗದ ಅಭ್ಯೈರ್ಥಿಗಳು) ಅವರಿಗೆ ಹಂಚಿಕೆಯಾಗಿರುವ ಸೀಟಿಗೆ ಸರ್ಕಾರವು ನಿಗಧಿಪಡಿಸಿರುವ ಕೋರ್ಸಿನ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಂಡು ಸೀಟನ್ನು ರದ್ದುಪಡಿಸಲಾಗುವುದು. ಅಂತಹ ಅಭ್ಯರ್ಥಿಗಳು ಸೀಟು ರದ್ಧತಿ ಪತ್ರ ಪಡೆಯಲು ದಿನಾಂಕ. 25.10.2023ರೊಳಗೆ ಪ್ರಾಧಿಕಾರಕ್ಕೆ ಹಾಜರಾಗಿ ಸೀಟನ್ನು ರದ್ದುಪಡಿಸಬಹುದಾಗಿ ತಿಳಿಸಿದೆ. ಶುಲ್ಕ ಪಾವತಿಸದ ಅಭ್ಯರ್ಥಿಗಳು (ಎಲ್ಲಾ ವರ್ಗದ ಅಭ್ಯೈರ್ಥಿಗಳು) ಸೀಟನ್ನು ರದ್ದುಪಡಿಸಲು ಇಚ್ಛಿಸಿದಲ್ಲಿ ಸರ್ಕಾರವು ನಿಗಧಿಪಡಿಸಿರುವ ಕೋರ್ಸಿನ ಶುಲ್ಕದ ಮೊತ್ತದ ಡಿಡಿಯೊಂದಿಗೆ ದಿನಾಂಕ. 25.10.2023ರೊಳಗೆ ಪ್ರಾಧಿಕಾರಕ್ಕೆ ಹಾಜರಾಗಿ ಸೀಟನ್ನು ರದ್ದುಪಡಿಸಿಕೊಳ್ಳಲು ತಿಳಿಸಿದೆ. ಈಗಾಗಲೇ ಐದು ಪಟ್ಟು ದಂಡ ಪಾವತಿಸಿ ಸೀಟನ್ನು ರದ್ದುಪಡಿಸಿರುವ ಅಭ್ಯರ್ಥಿಗಳಿಗೆ ದಿನಾಂಕ. 02.11.2023ರಿಂದ ಕೋರ್ಸಿನ ಶುಲ್ಕವನ್ನು ಕಟಾಯಿಸಿ ಉಳಿಕೆ ಮೊತ್ತವನ್ನು ಮರುಪಾವತಿ ಮಾಡಲಾಗುವುದು. ಅಂತಹ ಅಭ್ಯರ್ಥಿಗಳು ಪ್ರಾಧಿಕಾರಕ್ಕೆ ದಾಖಲಾತಿಗಳೊಂದಿಗೆ ದಿನಾಂಕ. 02.11.2023ರಂದು ಹಾಜರಾಗಬಹುದು.

ಹಂಚಿಕೆಯಾಗದೆ ಬಾಕಿ ಉಳಿದಿರುವ ಸೀಟುಗಳನ್ನು ಖಾಸಗಿ ಕಾಲೇಜುಗಳು ಪ್ರಾಧಿಕಾರಕ್ಕೆ ಹಿಂದಿರುಗಿಸಿದಲ್ಲಿ ಅಂತಹ ಸೀಟುಗಳ ಹಂಚಿಕೆಯ ವಿಧಾನವನ್ನು ದಿನಾಂಕ. 26.10.2023ರಂದು ಪ್ರಕಟಿಸಲಾಗುವುದು.

ಸಹಿ/-

ಕಾರ್ಯನಿರ್ವಾಹಕ ನಿರ್ದೇಶಕರು